**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

**ಕ್ರಿ ಮೊ ಸಂಖ್ಯೆ 883/2019**

**ಪಿರ್ಯಾದಿಃ** **ಶ್ರೀ ಎಲ್.ಆರ್.ಹರೀಶ್**

**-ವಿರುದ್ಧ-**

**ಆರೋಪಿ/ತರುಃ** **ಶ್ರೀ ಕೆ.ಟಿ.ಉಮೇಶ್**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆ**

ಪ್ರಶ್ನೆ-1: ನೀವು ಸಾಕ್ಷಿದಾರರ ಸಾಕ್ಷ್ಯದ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

ಉತ್ತರ: Yes

ಪ್ರಶ್ನೆ-2: ಪಿಡಬ್ಲೂ-1. ಶ್ರೀ ಎಲ್.ಆರ್.ಹರೀಶ್ ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಪಿರ್ಯಾದುದಾರರಿಗೆ ಪರಿಚಯವಿದ್ದು, 2018 ಇಸವಿ ಡಿಸೆಂಬರ್ ತಿಂಗಳ ಮೂರನೇ ವಾರದಲ್ಲಿ ಆರೋಪಿಯಾದ ನೀವು ಬ್ಯಾಂಕ್‌ನಲ್ಲಿ ಅಡಮಾನ ಮಾಡಿರುವ ಬಂಗಾರದ ಒಡವೆಗಳನ್ನು ಬಿಡಿಸಿಕೊಳ್ಳುವ ಉದ್ದೇಶಕೋಸ್ಕರ ಹಣದ ಅವಶ್ಯಕತೆ ಇದ್ದ ಕಾರಣ ಪಿರ್ಯಾದುದಾರರಿಂದ ರೂ.6,00,000/- ಗಳನ್ನು ಸಾಲವಾಗಿ ಪಡೆದು ಒಂದು ತಿಂಗಳ ಒಳಗಾಗಿ ಹಿಂತಿರುಗಿಸುವುದಾಗಿ ಒಪ್ಪಿಕೊಂಡಿರುತ್ತೀರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-3: ಪಿಡಬ್ಲೂ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಪಿರ್ಯಾದುದಾರರು ಒಂದು ತಿಂಗಳ ನಂತರ ಆರೋಪಿಯಾದ ನಿಮ್ಮನ್ನು ಬೇಟಿಯಾಗಿ ಹಣವನ್ನು ವಾಪಸ್ಸು ಕೇಳಿದಾಗ ನೀವು ಆರೋಪಿ ಒಡವೆಗಳನ್ನು ಪುನಃ ಬ್ಯಾಂಕಿನಲ್ಲಿ ಅಡಮಾನ ಮಾಡಿ ಹಣವನ್ನು ವಾಪಸ್ಸು ಕೊಡುತ್ತೇನೆ ಎಂದು ತಿಳಿಸಿದ್ದು, ನಂತರ ಪಿರ್ಯಾದುದಾರರು ಮತ್ತೋಮ್ಮೆ ಬೇಟಿಯಾಗಿ ಹಣವನ್ನು ಹಿಂತಿರುಗಿಸುವಂತೆ ಕೇಳಿದಾಗ ನೀವು ಆರೋಪಿ 5 ತಿಂಗಳ ಕಾಲಾವಕಾಶವನ್ನು ಕೇಳಿದ್ದು, ನಂತರ ಪಿರ್ಯಾದುದಾರರ ಆರೋಪಿಯಾದ ನಿಮ್ಮನ್ನು ಬೇಟಿ ಮಾಡಿ ಹಣವನ್ನು ಹಿಂತಿರುಗಿಸುವಂತೆ ಕೇಳಿದಾಗ ನಗದು ರೂಪದಲ್ಲಿ ಹಣವಿಲ್ಲ ಎಂದು ಚೆಕ್ ಅನ್ನು ದಿನಾಂಕ 03.09.2019ರ ದಿನಾಂಕವನ್ನು ನಮೂದಿಸಿ ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಲಿಮಿಟೆಡ್, ಲಕ್ಕವಳ್ಳಿ ಶಾಖೆಗೆ ಸೇರಿದ ಚೆಕ್ ಸಂಖ್ಯೆ 204128ನ್ನು ರೂ.6,00,000/- ಗಳಿಗೆ ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾದಿಯು ಕೆನರಾ ಬ್ಯಾಂಕ್, ಲಕ್ಕವಳ್ಳಿ ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ಸದರಿ ಚೆಕ್ಕು ಆರೋಪಿಯಾದ ನಿಮ್ಮ ಖಾತೆಯ '**Funds Insufficient**' ಎಂಬ ಕಾರಣಕ್ಕಾಗಿ ಅಮಾನ್ಯಗೊಂಡಿದೆ ಎಂದು ಹಿಂಬರಹ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-4: ಪಿಡಬ್ಲೂ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅನಂತರ ಪಿರ್ಯಾದಿಯು ದಿನಾಂಕ 17.09.2019ರಂದು ವಕೀಲರ ಮೂಲಕ ನೋಟೀಸ್ ನೀಡಿದ್ದು, ಸದರಿ ನೋಟೀಸ್ ಅನ್ನು ಆರೋಪಿಯಾದ ನೀವು ಪಡೆಯದೆ ಇದ್ದ ಕಾರಣ ನಾಟ್ ಕ್ಲೈಮಡ್ ಎಂಬ ಹಿಂಬರಹದೊಂದಿಗೆ ದಿನಾಂಕ 26.09.2019ರಂದು ವಾಪಸ್ಸು ಬಂದಿದ್ದರೂ ಸಹ ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ False

ಪ್ರಶ್ನೆ-5: ಪಿಡಬ್ಲೂ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಮೋಸ ಮಾಡುವ ಉದ್ದೇಶದಿಂದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ವಿಚಾರ ತಿಳಿದಿದ್ದರೂ ಸದರಿ ಚೆಕ್ ನ್ನು ತನಗೆ ನೀಡಿರುತ್ತೀರಿ, ನಂತರ ತಾನು ಆರೋಪಿಯಾದ ನಿಮಗೆ ನೋಟೀಸು ನೀಡಿದರೂ ಸಹ ಆರೋಪಿಯಾದ ನೀವು ಸದರಿ ಸಾಲದ ಹಣವನ್ನು ಹಿಂತಿರುಗಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ: False

ಪ್ರಶ್ನೆ-6: ನೀವು ಏನಾದರೂ ಹೇಳುವುದಿದೆಯಾ?

ಉತ್ತರ: Not at this moment

ಪ್ರಶ್ನೆ-7: ಈ ಪ್ರಕರಣದಲ್ಲಿ ನಿಮ್ಮ ಪರ ಸಾಕ್ಷಿ/ಪ್ರತಿರಕ್ಷಣೆ ಏನಾದರೂ ಇದೆಯೇ?

ಉತ್ತರ: Yes

(ಈ ಹೇಳಿಕೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದು, ಆರೋಪಿಯ ಉತ್ತರನ್ನು ಯಥಾವತ್ತಾಗಿ ದಾಖಲಿಸಿದ್ದೇನೆ.)

ದಿನಾಂಕ: 08.04.2026

**ಸಹಿ/-**

**(ರಾಹುಲ್ ಶೆಟ್ಟಿಗಾರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ತರೀಕೆರೆ.**